ರಾಜ್ಯದಲ್ಲಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ

204 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 30-11-1994 ಕ್ಕೆ ಇರುವ ಒಟ್ಟು ಏತ ನೀರಾವರಿಗಳೆಷ್ಟು;

ಆ) ಇವುಗಳಲ್ಲಿ ಎಷ್ಟು ಸುಸ್ಥಿತಿಯಲ್ಲಿವೆ ಹಾಗೂ ಎಷ್ಟು ಹಾಳಾಗಿವೆ.

ಇ) ಹಿರೇಕೆರೂರು ತಾಲ್ಲೂಕು ಮಾಸೂರ ಏತ ನೀರಾವರಿ, ರಟ್ಟಿಹಳ್ಳಿ, ಏತ ನೀರಾವರಿ ಬಂದ್ ಆಗಿರುವುದಕ್ಕೆ ಕಾರಣವೇನು;

ಈ) ಹಿರೇಕೆರೂರು ತಾಲ್ಲೂಕುಗಳಲ್ಲಿ ಹಳ್ಳೂರ ಏತ ನೀರಾವರಿ, ರಾಮತೀರ್ಥ ನೀರಾವರಿ ಯೋಜನೆಗಳು ಆಡಳಿತ ಹಾಗೂ ತಾಂತ್ರಿಕ ಮಂಜೂರಿಯಾಗಿ ಅಡಿಗಲ್ಲು ಸಮಾರಂಭ 1985-86ರ ಅವಧಿಯ ಸರ್ಕಾರದಿಂದ ಆಗಿದ್ದರೂ ಇದುವರೆಗೂ ಪ್ರಾರಂಭವಾಗದಿರಲು ಕಾರಣವೇನು?

ಶ್ರೀಮತಿ ಲೀಲಾದೇವಿ.ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) 494.

ಆ) 432 ಸುಸ್ಥಿತಿಯಲ್ಲಿವೆ. 53 ಹಾಳಾಗಿವೆ. 9 .ಯೋಜನೆಗಳು ಪ್ರಗತಿಯಲ್ಲಿವೆ (ಇನ್ನೂ ಪೂರ್ಣಗೊಂಡಿರುವುದಿಲ್ಲ).

ಇ) ಇವುಗಳ ಇನ್‌ಟೇಕ್‌ವೆಲ್, ಜಾಕ್‌ವೆಲ್ ಮತ್ತು ರೈಸಿಂಗ್ ಮೈನ್‌ಗಳು ಭಾಗಶಃ ಹೂಳು ತುಂಬಿವೆ. ನದಿಯಲ್ಲಿ ನೀರಿನ ಮಟ್ಟ ಕಡಿಮೆ ಆಗಿರುವುದರಿಂದ ಮತ್ತು ವಿದ್ಯುತ್ ವೋಲ್ಟೇಜ್ ತೊಂದರೆ ಇರುವುದರಿಂದ ಈ ಎರಡೂ ಯೋಜನೆಗಳು ತಾತ್ಕಾಲಿಕವಾಗಿ ಬಂದ್ ಆಗಿರುತ್ತವೆ. ಇವುಗಳನ್ನು ಕಾರ್ಯರೂಪಕ್ಕೆ ತರಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ರಾಮತೀರ್ಥ ಹಾಗೂ ಹಳ್ಳೂರ ಏತ ನೀರಾವರಿ ಯೋಜನೆಗಳನ್ನು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ ವತಿಯಿಂದ ಕೈಗೊಳ್ಳಲಾಗಿತ್ತು. ಈಗ ನಿಗಮಗಳನ್ನು ಮುಚ್ಚಲು ಸರ್ಕಾರ ತೀರ್ಮಾನಿಸಿದ್ದು ನಿಗಮಗಳು ಕೈಗೊಂಡಿದ್ದ ಏತ ನೀರಾವರಿ ಯೋಜನೆಗಳನ್ನು ಆರ್ಥಿಕ ಶಕ್ಯತೆಯನ್ನು ಪರಿಗಣಿಸಿ, ಸಣ್ಣ ನೀರಾವರಿ ಉತ್ತರ ವಲಯದಿಂದ ಕೈಗೊಳ್ಳಲಾಗುವುದು.

ಲೈಸನ್ಸ್-ಬಿನ್-ಲೈಸೆನ್ಸ್ ಸಾರಾಯಿ ಅಂಗಡಿಗಳು

206 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತಾಲ್ಲೂಕುವಾರು ಲೈಸನ್ಸ್ ಹೊಂದಿದ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು?